# 1 ನೇ ಹೆಚ್ಚುವರಿ ದಿವಾಣಿ ನ್ಯಾಯಾಲಯ ಹಾಗೂ ಪ್ರ.ದ.ನ್ಯಾದಂಡಾಧಿಕಾರಿಗಳು, ಅಥಣಿ

ಸಿ.ಸಿ.ನಂ. 5510/21
ಸಿಡಬ್ಲೂಃ 01 ಪಿಡಬ್ಲೂಃ01

ಸಾಕ್ಷಿದಾರರ ಹೆಸರುಃ ಮಲಕಪ್ಪ ಧರೆಪ್ಪ ದೊಡವಾಡ

ವಯಸ್ಸು ಃ 53 ವರ್ಷ

ಉದ್ಯೋಗ ಃ ಶೇತ್ಕಿ

ವಾಸಸ್ಥಳ ಃ ರಾಮತೀರ್ಥ

ದಿನಾಂಕ ಃ 27/10/2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚಣ ಬೋದಿಸಲಾಯಿತು.

ಮುಖ್ಯ ವಿಚಾರಣೆ ಸಸಅ ರವರಿಂದಃ

ಚಾಸಾ 6 ನನ್ನ ಅಣ್ಣ , ಚಾಸಾ 4 , 5, 7 ರಿಂದ 9 ರವರ ಪರಿಚಯ ಇರುತ್ತದೆ. ಚಾಸಾ 10 ನನ್ನ ಮಗ. ಆರೋಪಿತನ ಪರಿಚಯ ಇರುತ್ತದೆ.

2021 ರ ಆಗಸ್ಟ ತಿಂಗಳಿನಲ್ಲಿ ನಮ್ಮ ಗ್ರಾಮದ ಜನರು ಸೇರಿ ಸೊಸೈಟಿಗೆ ಜಾಗವನ್ನು ಬಿಡಬೇಕೆಂದು ತೀರ್ಮಾನಿಸಿದ್ದರು. ಆರೋಪಿ ಮತ್ತು ಇತರೆ 4-5 ಜನರು ಆ ರೀತಿ ಜಾಗ ಕೊಡಬಾರದೆಂದು ತಕರಾರು ಮಾಡಿದ್ದರು .

ಸದರಿ ಘಟನೆ ಆದ 6-7 ದಿನಗಳ ನಂತರ ನಾನು ರಾಮತೀರ್ಥ ಬಸ ನಿಲ್ದಾಣದ ಬಳಿ ಮ.3 ಗಂಟೆಗೆ ನಾನು ಮತ್ತು ಚಾಸಾ 7 ರವರು ಮಾತನಾಡುತ್ತಾ ನಿಂತಿದ್ದಾಗ ಆರೋಪಿ ಅಲ್ಲಿಗೆ ನನಗೆ ಬೈದಾಡುತ್ತಾ ಬಂದು ನನಗೆ ಕೈಯಿಂದ ಕಪಾಳಕ್ಕೆ ಹೊಡೆದಿರುತ್ತಾನೆ. ಜನರು ಬಿಡಿಸಿಕೊಳ್ಳಲು ಬಂದಾಗ ಆರೋಪಿ ತನ್ನ ಕಾಲಿನಿಂದ ನನ್ನ ಹೊಟ್ಟೆಗೆ ಮತ್ತು ಎದೆಗೆ ಒದ್ದಿರುತ್ತಾನೆ. ನಂತರ ಜನರು ಸೇರಿದ್ದನ್ನು ನೋಡಿ ಆ ನಂತರ ಆರೋಪಿ ತನ್ನ ಮನೆಗೆ ಹೋಗಿರುತ್ತಾನೆ. ಅದಾದ 10-15 ನಿಮಿಷಗಳ ನಂತರ ಆರೋಪಿ Splender ವಾಹನದಲ್ಲಿ ಬಂದು ಬಸ ನಿಲ್ದಾಣದ ಬಳಿ ರಸ್ತೆಯ ಮೇಲೆ ಹೋಗುತ್ತಿದ್ದ ನನಗೆ ಹಿಂದಿನಿಂದ ವೇಗವಾಗಿ ಬಂದು ಹಾಯಿಸಿರುತ್ತಾನೆ. ಆದ್ದರಿಂದ ನಾನು ಆ ರೀತಿ ಕೆಳಗೆ ಬಿದ್ದಿರುತ್ತೇನೆ. ನನ್ನ ಬೆನ್ನಿಗೆ ಮತ್ತು ಮುಖಕ್ಕೆ ಗಾಯಗಳಾಗಿದ್ದವು. ಆರೋಪಿ ತನ್ನ ವಾಹನದಲ್ಲಿ ಸ್ಥಳದಿಂದ ಪರಾರಿ ಆಗಿದ್ದ. ನಂತರ ನಾನು ಪೊ.ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನಂತರ ಪೋಲಿಸರ ಸ್ಥಳಕ್ಕೆ ಬಂದಾಗ ಅಪರಾದ ಸ್ಥಳವನ್ನು ನಾನು ತೋರಿಸಿರುತ್ತೇನೆ. ಸಾಕ್ಷಿ ಪ್ರಕರಣದ ಕಡತದಲ್ಲಿರುವ ಬಾವಚಿತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವಾಹನವನ್ನು ಈಗಾಗಲೇ ನ್ಯಾಯಾಲಯದ ಆದೇಶದ ಪ್ರಕಾರ ಬಿಡುಗಡೆ ಮಾಡಲಾಗಿದೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ .

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.VLK ರವರಿಂದಃ</u>**

ಪಾಟೀ ಸವಾಲಿಗೆ  ಸಮಯ ಕೋರಿದ್ದು, ರೂ.200/- ಖರ್ಚು ಸಹಿತ  ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಇದೆ

(ಪ್ರಶಾಂತ ನಾಗಲಾಪೂರ)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ